ಶ್ರೀ ಎ. ಶಂಕರ ಆಳ್ವ.—ಕಾನೂನಿಗೆ ವಿರೋಧವಾಗಿದ್ದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜೆ. ಎಲ್. ಕಬಾಡಿ.—ಕ್ರಮ ತೆಗೆದು ಕೊಳ್ಳಲು ಎಷ್ಟು ದಿವಸ ಬೇಕು.

ಶ್ರೀ ಎ ಶಂಕರ ಆಳ್ವ.—ಆದಷ್ಟು ಬೇಗ.

ಶ್ರೀ ಜೆ. ಎಲ್. ಕಬಾಡಿ.—ಮೂರುವರೆ ಸಾವಿರ ರೂಪಾಯಿ ದುರುಪಯೋಗ ಈ ಸಂಘದಲ್ಲಿ ಆಗಿರುವಾಗ ಸರಕಾರ ಎಷ್ಟು ದಿವಸದಲ್ಲಿ ಕ್ರಮ ತೆಗೆದುಕೊಳ್ಳುವುದು ?

ಶ್ರೀ ಎ. ಶಂಕರ ಆಳ್ವ.--ಆದಷ್ಟು ಬೇಗ. ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ.

ENQUIRY AGAINST MYSORE POWER LOOM SILK MANUFACTURERS COOPERATIVE SOCIETY

983. SRI M. SIDDAMADAIAH (Kollegal).—Will the *Minister for Co-operation be pleased to state.—

The reasons fer not conducting any kind of enquiry so far even though the Co-operation department has seized the books of accounts of the Mysore Power Loom Co-operative Society Limited, Avenue Road, Bangalore for misuse of silk meant for distribution to licensees?

SRI A. SHNNKARA ALVA (Minister for Co-operasion).—There is no society by name Mysore Power Loom Co-operative Society Limited, Avenue Road, Bangalore. But there is a Society by name Mysore Power Loom Silk Manufacturers C -operative Society Limited, Avenue Road, Bangalore. The books of accounts of this Society have been seized on suspicion that the silk meant for distribution to licensees has been misused and an enquiry is being conducted. The enquiry is not yet completed.

ಶ್ರೀ ಎಂ. ಸಿದ್ದಮಾದಯ್ಯ : ಲೆಕ್ಕಪತ್ರಗಳನ್ನು ವಶಪಡಿಸಿಕೊಂಡು ಐದಾರು ತಿಂಗಳಾದರೂ ಕೂಡ ಇನ್ನೂ ತನಿಖೆ ಪೂರ್ತಿಯಾಗದಿರಲು ಕಾರಣವೇನು ?

† ಶ್ರೀ ಎ. ಶಂಕರ ಆಳ್ವ : ಡೆಪ್ಯುಟಿ ರಿಜಿಸ್ಟ್ರಾರರು ತನಿಖೆ ಮಾಡುತ್ತಿದ್ದಾರೆ. ತನಿಖೆ ವರದಿ ಬಂದ ಮೇಲೆ ಯಾವ ರೀತಿಯ ಕ್ರಮ ತೆಗೆದುಕೊಳ್ಳಬೇಕೆಂಬುದನ್ನು ನಿರ್ಧಾರಮಾಡುವರು.

ಶ್ರೀ ಎಂ. ಸಿದ್ದಮಾದಯ್ಯ : ಒಂದೆರಡು ತಿಂಗಳಲ್ಲ ೬ ತಿಂಗಳಾಗಿದೆ ಇನ್ನೂ ಕ್ರಮ ತೆಗೆದುಕೊಳ್ಳದಿರಲು ಕಾರಣವೇನು ?

ಶ್ರೀ ಎ. ಶಂಕರ ಆಳ್ವ :—ಇನ್ನೂ ತನಿಖೆ ಪೂರ್ತಿಯಾಗಿಲ್ಲ ಆದಾದಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ನೂಲು ಹಂಚಿಕೆ ಮಾಡಲು ಆಸಿಸ್ಟೆಂಟ್ ರಿಜಿಸ್ಟ್ರಾರರನ್ನು ಹಾಕಿದ್ದೇವೆ ತನಿಖೆ ಮುಗಿಯಲು ಸಮಯಬೇಕು.

ಶ್ರೀ ಎಂ. ಸಿದ್ದಮಾದಯ್ಯ :—ಇದೇ ರೀತಿಯಲ್ಲಿ ಇನ್ನೂ ಕೆಲವು ಸೊಸೈಟಿಗಳಲ್ಲಿ ಅಕ್ರಮ ನಡೆದಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಶಂಕರ ಆಳ್ವ ;—ಯಾವ ಸೊಸೈಟಿ ಎಂದು ಹೇಳಿದರೆ ವಿಚಾರಿಸಿ ಹೇಳಬಹುದು.

---

* Astiriks indicate that remarks or speeches have not been revised by the member concernced.

ಶ್ರೀ ಜಿ. ರಾಮೇಗೌಡ :—ಕಳೆದ ವಾರ ಇದೇ ಸೊಸೈಟಿಯ ಮೇಲೆ ಇದೇ ರೀತಿಯ ಪ್ರಶ್ನೆ ಬಂದು ಇದೇ ಉತ್ತರ ಕೊಟ್ಟಿರುವಾಗ ಈ ಪ್ರಶ್ನೆಯನ್ನು ಆಡ್ಮಿಟ್ ಮಾಡಿದ್ದಾರೆ.

ಅಧ್ಯಕ್ಷರು :—ಅದರಲ್ಲಿ ಬೇರೆ ವಿಚಾರ ಸಹ ಕೇಳಿದ್ದಾರೆ, ಅದನ್ನು ಒದಗಿಸಬೇಕಾಗಿತ್ತು.

ಶ್ರೀ ಎಚ್. ಎಸ್. ಸಿದ್ದಪ್ಪ :—ಎಷ್ಟನೇ ತಾರೀಖು ಬುಕ್ಸ್ ಸೀಜ್ ಮಾಡಿರುವುದು ?

ಶ್ರೀ ಎ. ಶಂಕರ ಆಳ್ವ :—ಜನವರಿ ೯ನೆಯ ತಾರೀಖು ರಿಜಿಸ್ಟ್ರಾರರು ಆದೇಶ ಕೊಟ್ಟರು. ಅದರ ಪ್ರಕಾರ ತನಿಖೆ ಮಾಡುತ್ತಿದ್ದಾರೆ.

ಶ್ರೀ ಟಿ. ಎಂ. ಮಂಜುನಾಥ :—ಈ ಸಂಘಕ್ಕೆ ರೇಷ್ಮೆ ಒದಗಿಸಿರುವುದೆಷ್ಟು ? ಎಂಥ ವರ್ಗಗಳಿಗೆ ಇದನ್ನು ಹಂಚಲಾಗಿದೆ ?

ಶ್ರೀ ಎ. ಶಂಕರ ಆಳ್ವ :—ಎಲ್ಲರಿಗೂ ಹಂಚಿದೆ ಎಷ್ಟು ಜನರಿಗೆ ಎಂಬ ವಿವರವಿಲ್ಲ.

ಶ್ರೀ ಎಂ. ಸಿದ್ದಮಾದಯ್ಯ :—ದುರುಪಯೋಗವಾಗಿರುವುದನ್ನು ನೋಡಿ ಕ್ರಮ ತಪ್ಪಿತಸ್ಥರ ಮೇಲೆ ತೆಗದುಕೊಳ್ಳುವುದು ಯಾವಾಗ ?

ಶ್ರೀ ಎ. ಶಂಕರ ಆಳ್ವ :—ಇದರ ಬಗ್ಗೆ ವರದಿ ಬಂದ ನಂತರ.

CONSTRUCTION OF WASTE WEIR ON KENCHANAPURA TANK

1009. SRI. BETTASWAMY GOWDA (*Kudur*) .—Will the Minister for Public Works and Electrieity be pleased to state :—

(*a*) the reason for not constructing wasteweir to Kenchanapura tank in Magadi Taluk so far ,

(*b*) When the Government proposes to construct waste weir to the above said tank ?

SRI H. M. CHANNABASAPPA (*Minister for Public Work and Electricity*)

(*a*) The construction work of waterweir is not taken up as the revised estimate is not yet sactioned.

(*b*) After sanctioning the revised estimate the work will be taken up.

ಶ್ರೀ ಬೆಟ್ಟಸ್ವಾಮಿಗೌಡ :—ಕೆಂಚನಪುರ ಕೆರೆಯ ಕೋಡಿಯ ಕೆಲಸ ಇನ್ನೂ ಮುಂಜೂರಾಗದೆ ಉಳಿದಿರುವುದಕ್ಕೆ ಕಾರಣವೇನು ?

† ಶ್ರೀ ಎಚ್. ಎಂ. ಚನ್ನಬಸಪ್ಪ :—ಎಲ್ಲಿ ಏನು ತಪ್ಪಾಗಿದೆ, ಯಾರು ತಪ್ಪು ಮಾಡಿದ್ದಾರೆ ಎಂದು ಪತ್ತೆಮಾಡಿ ಯಾರು ಇದಕ್ಕೆ ಜವಾಬ್ದಾರರು ಎಂಬುದನ್ನು ನೋಡಿ ಮುಂದಿನ ಕೆಲಸ ಮಾಡಬೇಕು.

ಶ್ರೀ ಬೆಟ್ಟಸ್ವಾಮಿಗೌಡ :—ಒಡೆದುಹೋಗಿ ಸುಮಾರು ಆಕೇಳು ವರ್ಷವಾಗಿದೆ. ಬೇಗನೆ ಕೋಡಿ ಕೆಲಸ ಮಾಡದಿದ್ದರೆ ಇಡೀ ಕೆರೆಯೇ ಒಡೆದುಹೋಗುವುದು ಎಂಬುದು ಅವಗಾಹನೆಗೆ ಬಂದಿದೆಯೇ ?

ಶ್ರೀ ಎಚ್. ಎಂ. ಚನ್ನಬಸಪ್ಪ :—ಒಡೆದು ಐದಾರು ವರ್ಷವಾಗಿರುವುದು ಗಮನಕ್ಕೆ ಬಂದಿದೆ. ಇದನ್ನು ಕಟ್ಟಬೇಕಾದರ ಸ್ಕೆಂಟಿಫಿಕ್ಕಾಗಿ ಎಗ್ಜಾಮಿನ್ ಮಾಡಬೇಕು ಇದರಿಂದ ವಿಳಂಬವಾಗಿದೆ ಕಟ್ಟಲು ಅಂದಾಜು ಕೂಡ ಬಂದಿದೆ. ಅದು ಮುಂಜೂರಾದಮೇಲೆ ಕೆಲಸ ತೆಗೆದುಕೊಳ್ಳಲಾಗುವುದು.